Misc No.8/2022

R.W.:1

ಈ ದಿನ ದಿಃ05.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- ಅರ್ಜಿದಾರರ ಪರ ವಕೀಲರಾದ ಶ್ರೀ ಎಸ್.ವಿ.ವಿ ರವರಿಂದಃ-</u>**

1. 2 ಮತ್ತು 3ನೇ ಎದುರುದಾರರು ಅಣ್ಣತಮ್ಮಂದಿರು ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಅರ್ಜಿದಾರರು ಅಸಲು ದಾವಾ ಸಂಖ್ಯೆ 261/2016ರಂತೆ ದಾವೆ ಹೂಡಿರುವ ಸಂಗತಿ ನನಗೆ ಗೊತ್ತು ಎಂದರೆ ಸರಿ. ಸದರಿ ಅಸಲು ದಾವೆಯಲ್ಲಿ ನಾವು ಹಾಜರಾಗಿ ತಕರಾರು ಸಲ್ಲಿಸಿರುತ್ತೇವೆ. ಸದರಿ ದಾವೆಯು ವಜಾಗೊಳ್ಳುವ ಪೂರ್ವದಲ್ಲಿ ಕೋವಿಡ್-19 ಆಂಗವಾಗಿ ನ್ಯಾಯಾಲಯಗಳು ಮುಚ್ಚಿದ್ದವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನ್ಯಾಯಾಲಯಗಳು ಕಾರ್ಯನಿರ್ವಹಿಸದೆ ಇರುವ ಕಾರಣಕ್ಕೆ ಈ ಪ್ರಕರಣದ ದಿನಾಂಕಗಳ ಬಗ್ಗೆ ಅರ್ಜಿದಾರರಿಗೆ ಮಾಹಿತಿ ಪಡೆದುಕೊಳ್ಳಲು ಅವರ ವಕೀಲರ ಕಚೇರಿಗೆ ಹೋಗಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಕೋವಿಡ್ ಇರುವ ಕಾರಣಕ್ಕೆ ಅರ್ಜಿದಾರರು ಸದರಿ ಕೇಸಿನಲ್ಲಿ ಹಾಜರು ಆಗಲು ಸಾಧ್ಯವಿಲ್ಲದೆ ಆ ದಾವೆಯು ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ.

2. ಆ ಸಮಯದಲ್ಲಿ ಉಳಿದ ಅರ್ಜಿದಾರರು 7ನೇ ಅರ್ಜಿದಾರನಿಗೆ ಕೇಸು ನಡೆಸುವಂತೆ ತಿಳಿಸಿದ್ದರು, ಆದರೆ 7ನೇ ಅರ್ಜಿದಾರನಿಗೆ ವೈಯಕ್ತಿಕವಾದ ಕೌಟುಂಬಿಕ ಸಮಸ್ಯೆಯ ಇದ್ದ ಕಾರಣಕ್ಕೆ ಅವರು ಆ ದಾವೆಯಲ್ಲಿ ಹಾಜರಾಗಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಸದರಿ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಗೈರು ಹಾಜರಾಗಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಈಗಲೂ ವಾದಿಗಳೆ ಸ್ವಾಧೀನಾನುಭವದಲ್ಲಿದ್ದು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**